# ಕರ್ನಾಟಕವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 935 |
| ಸದಸ್ಯರ ಹೆಸರು | ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 17.12.2024 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರೈತರು ತಮ್ಮ ಕೃಷಿ ಭೂಮಿಯಲ್ಲಿನ ಕಲ್ಲು ಬಂಡೆಯನ್ನು ತೆರವು ಗೊಳಿಸಲು /ಒಡೆಸಲು ಗಣಿ ಮತ್ತು ಭೂವಿಜ್ಞಾನ ಇಲಾಖೆ ಯಿಂದ ಇರುವ ಮಾರ್ಗಸೂಚಿಗಳು ಯಾವುವು; | • ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 3-A(a) ರಂತೆ ಜಮೀನುಗಳನ್ನು ಕೃಷಿ ಯೋಗ್ಯ ಉದ್ದೇಶಕ್ಕಾಗಿ ಅಭಿವೃದ್ಧಿಪಡಿಸಲು/ ಸಮತಟ್ಟು ಮಾಡಲು ಸಂಬಂಧಪಟ್ಟ ಕೃಷಿ ಇಲಾಖೆ ಅಧಿಕಾರಿಗಳಿಂದ ದೃಢೀಕರಣವನ್ನು ಪಡೆದು 12 ತಿಂಗಳ ಅವಧಿಯವರೆಗೆ ಉಪಖನಿಜವನ್ನು ತೆಗೆಯಲು ಜಮೀನಿನ ಮಾಲೀಕರಿಗೆ ಅನುಮತಿ ನೀಡಲಾಗುತ್ತದೆ.<br>• ಕಾರ್ಯಾನುಮತಿದಾರರು ಜಮೀನನ್ನು ಕೃಷಿ ಯೋಗ್ಯ ಉದ್ದೇಶಕ್ಕೆ ಸಮತಟ್ಟು / ಅಭಿವೃದ್ಧಿಪಡಿಸುವಾಗ ದೊರೆಯುವ ಉಪಖನಿಜವನ್ನು ಸ್ವಂತ ಉದ್ದೇಶಕ್ಕಾಗಿ ಬಳಕೆ ಮಾಡಿದ್ದಲ್ಲಿ, ರಾಜಧನ ಮತ್ತು ಇತರೆ ಅನ್ವಯಿಕ ಶುಲ್ಕಗಳನ್ನು ಸಂದಾಯ ಮಾಡುವಂತಿಲ್ಲ.<br>• ಕಾರ್ಯಾನುಮತಿ ಪ್ರದೇಶದಲ್ಲಿ ದೊರೆಯುವ ಉಪ ಖನಿಜವನ್ನು ಸ್ವಂತ ಉದ್ದೇಶಕ್ಕೆ ಬಳಕೆ ನಂತರ ಉಳಿಯುವ ಉಪಖನಿಜಕ್ಕೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಖನಿಜ ಸಾಗಾಣಿಕೆ ಪರವಾನಗಿ ಪಡೆದು ರಾಜಧನ ಮತ್ತು ಅನ್ವಯಿಕ ಶುಲ್ಕಗಳನ್ನು ಪಾವತಿಸಿ ಮಾರಾಟ ಮಾಡಬಹುದಾಗಿರುತ್ತದೆ.<br>• ಮುಂದುವರೆದು, ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 35 ರಂತೆ ಪಟ್ಟಾ ಜಮೀನುಗಳಲ್ಲಿ ಸ್ವಂತ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರಿಯ ಪೂರ್ವಾನುಮತಿಯೊಂದಿಗೆ ಸಣ್ಣ ಪ್ರಮಾಣದಲ್ಲಿ ಉಪ ಖನಿಜವನ್ನು ತೆಗೆದು ಬಳಸಿಕೊಳ್ಳಲು ಅವಕಾಶವಿದ್ದು, ಈ ರೀತಿ ತೆಗೆದ ಉಪಖನಿಜವನ್ನು ವಾಣಿಜ್ಯ ಉದ್ದೇಶ / ಮಾರಾಟ ಮಾಡಲು ಅವಕಾಶವಿರುವುದಿಲ್ಲ. |
| ಆ) | ಯಾವ ಪ್ರಮಾಣದ ಕೃಷಿ ಭೂಮಿಯಲ್ಲಿನ ಬಂಡೆ ತೆರವುಗೊಳಿಸಲು | • ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 3-A(a) ರಂತೆ ಜಮೀನುಗಳನ್ನು ಕೃಷಿ ಯೋಗ್ಯ ಉದ್ದೇಶಕ್ಕಾಗಿ ಅಭಿವೃದ್ಧಿಪಡಿಸಲು / ಸಮತಟ್ಟು ಮಾಡುವ ಪ್ರಕರಣಗಳಲ್ಲಿ ಇಂತಿಷ್ಟೆ ಪ್ರಮಾಣದ ಉಪಖನಿಜ ತೆಗೆಯ- |

| | | |
|---|---|---|
| | -ಅನುಮತಿಯ ಅವಶ್ಯಕತೆಯಿರು ವುದಿಲ್ಲ; ಯಾವ ಪ್ರಮಾಣದ ಬಂಡೆಯನ್ನು ತೆರವು ಗೊಳಿಸಲು ಅನುಮತಿಯ ಅವಶ್ಯಕತೆಯಿರುತ್ತದೆ; ಇದಕ್ಕೆ ಪಾವತಿಸಬೇಕಾದ ಶುಲ್ಕವೆಷ್ಟು; | -ಬೇಕೆಂಬ ಬಗ್ಗೆ ನಿಯಮಗಳಲ್ಲಿ ಉಲ್ಲೇಖವಿರುವುದಿಲ್ಲ. ಆದರೆ ಜಮೀನು ಸಮತಟ್ಟು ಮಾಡಿ ಕೃಷಿ ಯೋಗ್ಯ ಜಮೀನನ್ನಾಗಿ ಅಭಿವೃದ್ಧಿಪಡಿಸಿಕೊಳ್ಳುವ ಪ್ರಕರಣಗಳಲ್ಲಿ ಬಂಡೆಯನ್ನು ತೆಗೆಯಲು ಮೇಲಿನ ನಿಯಮದಂತೆ ಪಟ್ಟಾದಾರರು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಕಾರ್ಯಾನುಮತಿ ಪಡೆಯುವುದು ಕಡ್ಡಾಯವಿರುತ್ತದೆ.<br>• ಕಾರ್ಯಾನುಮತಿ ಪ್ರದೇಶದಲ್ಲಿ ದೊರೆಯುವ ಉಪ ಖನಿಜವನ್ನು ಸ್ವಂತ ಉದ್ದೇಶಕ್ಕೆ ಬಳಕೆ ನಂತರ ಉಳಿಯುವ ಉಪಖನಿಜವನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಖನಿಜ ಸಾಗಾಣಿಕೆ ಪರವಾನಿಗೆ ಪಡೆದು ರಾಜಧನ ಮತ್ತು ಅನ್ವಯಿಕ ಶುಲ್ಕಗಳನ್ನು ಪಾವತಿಸಿ ಮಾರಾಟ ಮಾಡಬಹುದಾಗಿದ್ದು, ಪ್ರತಿ ಮೆಟ್ರಿಕ್ ಟನ್ ಕಟ್ಟಡ ಕಲ್ಲಿಗೆ ₹70/- ರಾಜಧನ ಮತ್ತು ₹28/- ಹೆಚ್ಚುವರಿ ಪಾವತಿ ಮೊತ್ತವನ್ನು ಸಂದಾಯ ಮಾಡಬೇಕಾಗಿರುತ್ತದೆ.<br>• ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 35 ರಂತೆ ಪಟ್ಟಾ ಜಮೀನುಗಳಲ್ಲಿ ಸ್ವಂತ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರಿಯ ಪೂರ್ವಾನುಮತಿ ಯೊಂದಿಗೆ ಸಣ್ಣ ಪ್ರಮಾಣದಲ್ಲಿ ಉಪಖನಿಜವನ್ನು ತೆಗೆದು ಬಳಸಿಕೊಳ್ಳಲು ಅವಕಾಶವಿರುತ್ತದೆ. |
| ಇ) | ಹಲವು ರೈತರು ಬಂಡೆಯನ್ನು ತೆರವುಗೊಳಿಸಲು ಅಥವಾ ಸ್ಫೋಟಿಸಲು ಪ್ರಯತ್ನಿಸಿ ಸಾವನ್ನಪ್ಪುತ್ತಿರುವುದು/ ಗಾಯಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ರೈತರಿಂದ ಹಣ ಪಾವತಿಸಿಕೊಂಡು ಸದರಿ ಬಂಡೆಗಳನ್ನು ಸರ್ಕಾರದ ವತಿಯಿಂದಲೇ ತೆರವುಗೊಳಿಸಲು ಅವಕಾಶವಿದೆಯೇ? ಇದ್ದಲ್ಲಿ, (ಆದೇಶದ ಪ್ರತಿಯನ್ನು ನೀಡುವುದು) | • ರೈತರು ಬಂಡೆಯನ್ನು ತೆರವುಗೊಳಿಸಲು ಅಥವಾ ಸ್ಫೋಟಿಸಲು ಪ್ರಯತ್ನಿಸಿ ಸಾವನ್ನಪ್ಪುತ್ತಿರುವ / ಗಾಯ ಗೊಳ್ಳುತ್ತಿರುವ ಪ್ರಕರಣಗಳು ವರದಿಯಾಗಿರುವುದಿಲ್ಲ.<br>• ರೈತರಿಂದ ಹಣ ಪಾವತಿಸಿಕೊಂಡು ಸದರಿ ಬಂಡೆಗಳನ್ನು ಸರ್ಕಾರದ ವತಿಯಿಂದ ತೆರವುಗೊಳಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |

ಸಂಖ್ಯೆ ಸಿಐ -ಎಂಎಂಎನ್/305/2024

S. S. Mallikarjun

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.